# ರೋ–ಹಿಟ್!

■ ಗಿರೀಶ್ ದೊಡ್ಡಮನಿ




**ಮೊಹಾಲಿಯಲ್ಲಿ ರೋಹಿತ್ ದ್ವಿಶತಕದತ್ತ ಸಾಗಿದ್ದು**

| ರನ್ | ಎಸೆತ |
|---|---|
| 0–50 | 65 |
| 51–100 | 50 |
| 101–150 | 18 |
| 151–200 | 18 |

ಈಚೆಗೆ ಮೊಹಾಲಿಯಲ್ಲಿ ಶ್ರೀಲಂಕಾ ಕ್ರಿಕೆಟ್ ತಂಡದ ಎದುರಿನ ಏಕದಿನ ಪಂದ್ಯದಲ್ಲಿ ದ್ವಿಶತಕ ಬಾರಿಸಿದ ರೋಹಿತ್ ಶರ್ಮಾ ಅವರ ಬ್ಯಾಟಿಂಗ್ ವೈಖರಿಯನ್ನು ಒಂದು ಬಾರಿ ಅವಲೋಕಿಸಿ. ಕ್ರೀಡಾಂಗಣದ ಎಲ್ಲ ಭಾಗಗಳಿಗೂ ಚೆಂಡನ್ನು ಓಡಾಡಿಸಿದ ಪರಿ ಎದ್ದು ಕಾಣುತ್ತದೆ. ಅವರ ರನ್ ಗಳಿಕೆಯ ವೇಗವನ್ನು ಗಮನಿಸಿದರೆ, ನುರಿತ 'ಫಾರ್ಮುಲಾ ಒನ್' ಡ್ರೈವರ್ ತನ್ನ ವಾಹನದ ಗಿಯರ್‌ಗಳನ್ನು ಬದಲಿಸುತ್ತಾ ವೇಗ ಹೆಚ್ಚಿಸಿದಂತೆ ಭಾಸವಾಗುತ್ತದೆ. 115 ಎಸೆತಗಳಲ್ಲಿ 100ರ ಗಡಿ ದಾಟಿದ್ದ ಅವರು ನಂತರ ನೂರು ರನ್ ಗಳನ್ನು ಕೇವಲ 36 ಎಸೆತಗಳಲ್ಲಿ ಸೂರೆ ಮಾಡಿದ್ದರು.

ಅವರ ಹೊಡೆತಗಳಲ್ಲಿ ಬಲಪ್ರಯೋಗಕ್ಕಿಂತ ಕೌಶಲ್ಯ ಎದ್ದುಕಾಣುತ್ತಿತ್ತು. ಮುಂಬೈನ ಗಲ್ಲಿ ಕ್ರಿಕೆಟ್ ಆಡುವವರಿಗೆ ಒಲಿಯುವ ಕಲೆ ಇದು. ಕಟ್ಟಡಗಳ ಗಾಜುಗಳಿಗೆ ಚೆಂಡು ಬಡಿಯದಂತೆ ಸಿಕ್ಸರ್ ಎತ್ತುವ, ಬೌಲರ್ ತಲೆ ಮೇಲಿಂದ ನೇರವಾಗಿ ಚೆಂಡನ್ನು ಬೌಂಡರಿಗೆರೆ ದಾಟಿಸುವ ಕೌಶಲ ರೂಢಿಯಾಗುವುದು ಆ ಬೀದಿಗಳಲ್ಲಿಯೇ.

2010ರಲ್ಲಿ ಗ್ವಾಲಿಯರ್ ನಲ್ಲಿ ಸಚಿನ್ ತೆಂಡೂಲ್ಕರ್ ದ್ವಿಶತಕದ (ಅಜೇಯ 200) ವಿಶ್ವದಾಖಲೆ ನಿರ್ಮಿಸಿದ್ದರು. ಏಕದಿನ ಕ್ರಿಕೆಟ್ ನಲ್ಲಿ ಇಂತಹದೊಂದು ಸಾಧ್ಯತೆಯನ್ನು ಅವರು ತೋರಿಸಿಕೊಟ್ಟಿದ್ದರು. ಆ ನಂತರ ವೀರೇಂದ್ರ ಸೆಹ್ವಾಗ್, ಕ್ರಿಸ್ ಗೇಲ್, ನ್ಯೂಜಿಲೆಂಡ್ ನ ಮಾರ್ಟಿನ್ ಗಪ್ಟಿಲ್ ಈ ಸಾಧನೆ ಮಾಡಿದ್ದರು.

ಆದರೆ, ರೋಹಿತ್ ಶರ್ಮಾ ಅವರೆಲ್ಲರಿಗಿಂತ ಬಹಳ ಮುಂದೆ ಸಾಗಿದ್ದಾರೆ. ಏಕದಿನ ಕ್ರಿಕೆಟ್ ನಲ್ಲಿ ದ್ವಿಶತಕವನ್ನು ಒಂದಲ್ಲ, ಎರಡಲ್ಲ ಮೂರು ಬಾರಿ ಹೊಡೆಯಬಹುದು ಎಂದು ತೋರಿಸಿಕೊಟ್ಟಿದ್ದಾರೆ. ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿ ತಂಡದ ನಾಯಕತ್ವ ವಹಿಸಿದ್ದ ರೋಹಿತ್ ಈ ಸಾಧನೆ ಮಾಡಿರುವುದು ಗಮನಾರ್ಹ. ಧರ್ಮಶಾಲಾದಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಹೀನಾಯವಾಗಿ ಸೋತಿತ್ತು. ರೋಹಿತ್ ಕೂಡ ವೈಫಲ್ಯ ಅನುಭವಿಸಿದ್ದರು. ಆದರೆ, ಫೀನಿಕ್ಸ್ ಹಕ್ಕಿಯಂತೆ ಬೂದಿಯಿಂದ ಮೇಲೆದ್ದು ಬಂದ ರೋಹಿತ್ ತಮ್ಮ ನೈಜ ತಾಕತ್ತು ಸಾಬೀತು ಮಾಡಿದರು. ತಮ್ಮ ಪತ್ನಿಗೆ ಮದುವೆಯ ಎರಡನೇ ವಾರ್ಷಿಕೋತ್ಸವದ ಕೊಡುಗೆಯೆಂಬಂತೆ ದ್ವಿಶತಕ ಹೊಡೆದರು.

ಮಹಾರಾಷ್ಟ್ರದ ನಾಗಪುರದಲ್ಲಿ ಕೆಳ ಮಧ್ಯಮ ವರ್ಗದ ಕುಟುಂಬದಲ್ಲಿ 1987ರಲ್ಲಿ ಜನಿಸಿದ್ದ ರೋಹಿತ್ ವಿದ್ಯಾಭ್ಯಾಸಕ್ಕಾಗಿ ದೊಂಬಿವಿಲಿಯ ಚಿಕ್ಕಪ್ಪನ ಮನೆಯಲ್ಲಿದ್ದರು. ಗಲ್ಲಿ ಕ್ರಿಕೆಟ್ ನಲ್ಲಿ ರೋಹಿತ್ ಪ್ರತಿಭೆಯನ್ನು ಗುರುತಿಸಿದವರೂ ಚಿಕ್ಕಪ್ಪನೇ. ಕ್ರಿಕೆಟ್ ತರಬೇತಿ ಚೆನ್ನಾಗಿದ್ದ ಸ್ವಾಮಿ ವಿವೇಕಾನಂದ ಶಾಲೆಗೆ ಸೇರಿಸಿದರು. ಅಲ್ಲಿ ತರಬೇತುದಾರ ದಿನೇಶ್ ಲಾಡ್ ಅವರು ರೋಹಿತ್ ಅವರ ಪ್ರತಿಭೆಗೆ ಸಾಣೆ ಹಿಡಿದರು. ಆರ್ಥಿಕ ಸಂಕಷ್ಟ ನಿಭಾಯಿಸಲು ವಿದ್ಯಾರ್ಥಿ ವೇತನವನ್ನೂ ಕೊಡಿಸಿದರು. ಆ ನಂತರ ರೋಹಿತ್ ಹಿಂದಿರುಗಿ ನೋಡಲಿಲ್ಲ.

ನಿಗದಿಯ ಓವರ್ ಪಂದ್ಯಗಳಲ್ಲಿ 'ಹಿಟ್ ಮ್ಯಾನ್' ಎಂದೇ ಹೆಸರಾಗಿರುವ ರೋಹಿತ್ ಐಪಿಎಲ್ ನಲ್ಲಿ ಮೂರು ಬಾರಿ ಪ್ರಶಸ್ತಿ ಗೆದ್ದಿರುವ ಮುಂಬೈ ಇಂಡಿಯನ್ಸ್ ತಂಡದ ಸಾರಥಿ. ಆದರೆ, ಟೆಸ್ಟ್ ಕ್ರಿಕೆಟ್ ನಲ್ಲಿ ಇನ್ನೂ ಗಟ್ಟಿ ಹೆಜ್ಜೆಗಳನ್ನು ಇಡಬೇಕಾಗಿದೆ. ಅಲ್ಲದೇ ವಿದೇಶಿ ನೆಲದಲ್ಲಿಯೂ ತಮ್ಮ ಬೀಸಾಟವನ್ನು ಸಾಬೀತುಪಡಿಸುವ ಸವಾಲು ಅವರ ಮುಂದಿದೆ.